† ಶ್ರೀ ಆಲೂರು ಹನುಮಂತಪ್ಪ.—2-9-1962 ರಲ್ಲಿ ಕೆರೆ ಒಡೆಯಿತು. ವಿಪರೀತ ಮಳೆ ಬಂದು, ಅನೀರಿಕ್ಷಿತವಾಗಿ ಹೆಚ್ಚು ಪ್ರವಾಹ ಬಂದುದರಿಂದ ಕೆರೆ ಒಡೆಯಿತು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಯಾವ ಸ್ಥಳದಲ್ಲಿ ಕೆರೆ ಒಡೆದಿದೆಯೋ ಅಲ್ಲಿಯೇ ಕೋಡಿ ಕಟ್ಟಬೇಕೆಂದು ಹೇಳಿದರೂ ಕೂಡ ರಿಂಗ್ ಬಂಡ್ ಹಾಕುವುದು, ಪ್ರತಿವರ್ಷ ಅದು ಕೆತ್ತು ಹೋಗುವುದು ಹೀಗಾಗಿ ಬಹಳ ನಷ್ಟವಾಗಿದೆ. ಇದರ ಬಗ್ಗೆ ಬೇಗ ತೀರ್ಮಾನ ಮಾಡುತ್ತೀರಾ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ತೀರ್ಮಾನ ಮಾಡಿದ್ದೇವೆ. ಕೋಡಿಯನ್ನು ಇಡತಕ್ಕ ಸ್ಥಳ ಕಿಂಕ್ ಪೋಯಿಂಟ್ ಎಂದರೆ ಕೆರೆಯ ಮಧ್ಯ ಭಾಗದಲ್ಲಿ ಎಂದು ಈ ಕೆಲಸ ಈಗಾಗಲೇ ನಡೆಯುತ್ತಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗಲೂ ಕೂಡ ವೇಸ್ಟ್‌ವೇರ್ ಕಟ್ಟದೆ ತೊಂದರೆಯಾಗಿದೆ. ಪ್ರತಿವರ್ಷ ಕೆರೆ ಒಡೆದು ಹೋಗಿ ರೈತರಿಗೆ ನಷ್ಟವಾಗಿ ಜಮೀನು ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಈಗ ಸಧ್ಯಕ್ಕೆ ರಿಂಗ್ ಬಂಡ್ ಹಾಕಿ ಜಮೀನುಗಳಿಗೆ ನೀರನ್ನು ಕೊಡುತ್ತಿದ್ದೇವೆ. ಆದುದರಿಂದ ಯಾವ ತೊಂದರೆಯೂ ಆಗಿಲ್ಲ.

Introduction of Rationing in the State

*Q.—356 Sri ANNARAO GANAMUKHI (Afzalpur).—

Will the Government be pleased to state :—

(*a*) whether rationing formal or informal would be introduced in all the Towns and Cities having a population of more than 25,000 in the State;

(*b*) if not, what alternative arrangements will be made to meet the demand of the consumers ?

A.—Sri M. V. KRISHNAPPA (Minister for Revenue).—

(*a*) The system of informal rationing has been introduced in Bangalore City from November 1964. The question of extending informal rationing to some of the other big towns in the State is under the consideration of Government.

(*b*) Arrangements will be made to meet the demand of the vulnerable section of the consumers in the urban areas other than Bangalore City by suitable mothly allotments of Foodgrains out of the buffer stocks held by the State.

ಶ್ರೀ ಅಣ್ಣಾರಾವ್ ಗಣಮುಖಿ.—(ಎ) ಭಾಗಕ್ಕೆ ಉತ್ತರವಾಗಿ ಅನೌಪಚಾರಿಕವಾಗಿ ಪಡಿತರ ಪದ್ಧತಿಯನ್ನು ಬೆಂಗಳೂರಿನಲ್ಲಿ ಜಾರಿಗೆ ತಂದಿದ್ದೇವೆಂದೂ ಇತರ ಪಟ್ಟಣಗಳಲ್ಲಿಯೂ ತರಬೇಕು ಎನ್ನುವುದು ವಿಚಾರದಲ್ಲಿದೆಯೆಂದೂ ಹೇಳಿದ್ದಾರೆ ? ಇದೆಲ್ಲಕ್ಕೂ ಕೂಡಿ ಜನ ಎಷ್ಟಾಗುತ್ತದೆ ಮತ್ತು ಎಷ್ಟು ಆಹಾರ ಧಾನ್ಯ ಬೇಕಾಗುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಸಧ್ಯಕ್ಕೆ ಬೆಂಗಳೂರು ನಗರಕ್ಕೆ ಸಾಕಾದಷ್ಟು ಆಹಾರವನ್ನು ಕೊಡುತ್ತೇವೆಂದು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಆದರ ಮೇರೆ ಅಲ್ಲಿ ಅನೌಪಚಾರಿಕ ಪಡಿತರ ಪದ್ಧತಿಯನ್ನು ಇಟ್ಟುಕೊಂಡಿದ್ದೇವೆ. ಇದರ ಜೊತೆಗೆ ನಮ್ಮ ವಸೂಲಿಯಲ್ಲಿ ಮೈಸೂರಿನಲ್ಲಿ ಇದೇ ತರಹ ಪದ್ಧತಿ ನಡೆಯುತ್ತಿದೆ ಮತ್ತು ಮಂಗಳೂರಿನಲ್ಲಿ ಈಗ ಪ್ರಾರಂಭಮಾಡಿದ್ದೇವೆ. ಆದರೆ

† Indicates that the remarks or speeches have not been revised by the member concerned.

(ಶ್ರೀ ಎಂ. ವಿ. ಕೃಷ್ಣಪ್ಪ)

ಇನ್ನೂ ಅವರಿಗೆ ಸರಿಯಾದ ಕೋಟಾ ಕೊಟ್ಟಿಲ್ಲ. ಇನ್ನು ಕೆಲವು ದಿವಸಗಳಲ್ಲಿ ಕೊಡುವುದಕ್ಕೆ ಏರ್ಪಾಟು ನಡೆಯುತ್ತಿದೆ. ಸಂಸ್ಥಾನದಲ್ಲಿ ಅರ್ಬನ್ ಜನಸಂಖ್ಯೆ, ಅಭಾವ ಪ್ರದೇಶಗಳು ಎಲ್ಲಾ ತೆಗೆದು ಕೊಂಡರೆ ಸುಮಾರು 50 ಲಕ್ಷ ಜನಸಂಖ್ಯೆ ಆಗುತ್ತದೆ. ಅವರಿಗೆಲ್ಲ ಏಳೆಂಟು ತಿಂಗಳಾದರೂ ಆಹಾರ ಧಾನ್ಯಗಳನ್ನು ಒದಗಿಸಬೇಕೆಂದರೆ ಸುಮಾರು ಐದುಲಕ್ಷ ಟನ್ ಆಹಾರ ಬೇಕಾಗುತ್ತದೆ. ಇದರಲ್ಲಿ ಕೇಂದ್ರ ಸರ್ಕಾರದವರು ಎರಡೂವರೆ ಲಕ್ಷ ಟನ್ ಕೊಡುತ್ತಾರೆ. ಉಳಿದ ಎರಡೂವರೆ ಲಕ್ಷ ಟನ್ ನಾವೇ ಹೊಂದಿಸಿಕೊಳ್ಳಬೇಕಾಗಿದೆ. ಇವರ ಪೈಕಿ ಒಂದು ಲಕ್ಷ ಟನ್ ಸಂಗ್ರಹವಾಗಿದೆ, ಒಂದೂವರೆ ಲಕ್ಷಟನ್ ಬತ್ತ ಮತ್ತು ಜೋಳ ಸಂಗ್ರಹ ಮಾಡಬೇಕಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಜೋಳ ತಿನ್ನತಕ್ಕ ಜನರು ಎಷ್ಟಿದ್ದಾರೆ ಮತ್ತು ಎಷ್ಟು ಜನರಿಗೆ ಜೋಳವನ್ನು ಕೊಟ್ಟಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸುಮಾರು ಒಂದು ಲಕ್ಷಟನ್ ಜೋಳವನ್ನು ಸಂಗ್ರಹ ಮಾಡ ಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಆ ಬಗ್ಗೆ ಆರ್ಡ್ಲ್ ಇವತ್ತು ಹೊರಡುತ್ತದೆ. ಒಂದು ಲಕ್ಷ ಟನ್ ಸಂಗ್ರಹ ಮಾಡಬೇಕೆಂಬ ಗುರಿ ಇದೆ. ಎಷ್ಟಾಗುತ್ತದೆಂಬುದನ್ನು ಹೇಳುವುದಕ್ಕಾಗುವು ದಿಲ್ಲ. ಮೈನೂರು ರಾಜ್ಯದಲ್ಲಿ ಜೋಳ ತಿನ್ನುವ ಅರ್ಬನ್ ಜನಸಂಖ್ಯೆ ಕಡಮೆ. ಬೆಂಗಳೂರು, ಮೈನೂರು, ಮಂಗಳೂರು, ಕೋಲಾರದ ಚಿನ್ನದ ಗಣಿ ಪ್ರದೇಶಗಳ ಜನಸಂಖ್ಯೆಯನ್ನು ತೆಗೆದು ಕೊಂಡರೆ 20 ಲಕ್ಷ ಆಗುತ್ತದೆ. ಇನ್ನುಳಿದದ್ದು ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ ಈ ಎಲ್ಲಾ ಸೇರಿ 5 ಲಕ್ಷ ಆಗುವುದಿಲ್ಲ. ಆದುದರಿಂದ ಅರ್ಬನ್ ಜನಸಂಖ್ಯೆಯಲ್ಲಿ ಅಕ್ಕಿ ತಿನ್ನುವ ಜನರೇ ಜಾಸ್ತಿ, ಜೋಳ ತಿನ್ನುವವರು ಕಡಮೆ.

ಶ್ರೀ ಆರ್. ಎಸ್. ಪಾಟೀಲ್.—ರಾಜ್ಯಪಾಲರ ಭಾಷಣದಲ್ಲಿ ಈ ವಿಷಯ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈಗ ಒಂದು ತಿಂಗಳ ನಂತರ ಆ ವಿಷಯ ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಒಂದು ವಿಷಯವನ್ನು ಪರಿಶೀಲನೆ ಮಾಡಿ ಅದನ್ನು ಪೂರ್ತಿ ಮಾಡುವುದಕ್ಕೆ ಎಷ್ಟು ದಿವಸ ಹಿಡಿಯುತ್ತದೆ ಮತ್ತು ಪರಿಶೀಲನೆ ಮುಗಿಯುವುದರಲ್ಲಿ ಈ ವರ್ಷ ಮುಗಿಯುತ್ತದೆಯೇ ಹೇಗೆ ಎನ್ನುವುದನ್ನು ತಿಳಿಸುತ್ತಾರೆಯೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಬಫರ್ ಸ್ಟಾಕ್ಸ್ ಎಷ್ಟಾಗುತ್ತದೆ ಎನ್ನುವುದರ ಮೇಲೆ ಪರಿಶೀಲನೆಯಾಗಿ ತೀರ್ಮಾನವಾಗಬೇಕಾಗಿದೆ. ಈಗ ನಮಗೆ ಐದು ಲಕ್ಷಟನ್ ಆಹಾರಧಾನ್ಯ ಬೇಕು. ಇದರಲ್ಲಿ ಎರಡೂವರೆ ಲಕ್ಷಟನ್ ಕೇಂದ್ರ ಕೊಡುತ್ತದೆ. ಇನ್ನುಳಿದ ಎರಡೂವರೆ ಲಕ್ಷಟನ್ ನಾವು ವಸೂಲು ಮಾಡಬೇಕಾಗಿದೆ. ಅದರಲ್ಲಿ ಒಂದು ಲಕ್ಷ ಟನ್ ಜೋಳ, ಒಂದೂವರೆ ಎರಡು ಲಕ್ಷ ಟನ್ ಬತ್ತ, ಅಕ್ಕಿ ಬೇಕಾಗುತ್ತದೆ. ಇದುವರೆಗೆ ಒಂದು ಲಕ್ಷ ಟನ್ ಬತ್ತ ವಸೂಲಾಗಿದೆ ಇನ್ನೂ ಒಂದು ಲಕ್ಷ ಟನ್ ಜೋಳ ಮತ್ತು ಒಂದು ಲಕ್ಷ ಟನ್ ಬತ್ತ ವಸೂಲಾಗಬೇಕು. ಇದು ಪೂರ್ತಿಕೆ ಯಾಗುತ್ತದೆ ಎನ್ನುವ ಭರವಸೆ ಇದೆ. ಇದಾಗುವವರೆಗೂ ನಿಖರವಾಗಿ ತೀರ್ಮಾನ ಮಾಡುವುದ ಕ್ಕಾಗುವುದಿಲ್ಲ. ಎಷ್ಟು ಸಾಧ್ಯವೋ ಅಷ್ಟನ್ನು ಕೊಡುತ್ತೇವೆ ಮತ್ತು ಎಲ್ಲಿ ಹೆಚ್ಚು ಗಲಭೆ ಮಾಡು ತ್ತಾರೆಯೋ ಅಲ್ಲಿಗೆ ಕೊಡುತ್ತೇವೆ.

ಶ್ರೀಮತಿ ಸುಶೀಲಬಾಯಿ ಹೀರಾಚಂದ್ ಷಾ.—ಜೋಳದ ಸೀಸನ್ ಮುಗಿಯಲಿಕ್ಕೆ ಬಂತು. ಜೋಳವನ್ನು ಯಾವ ಯಾವ ಜಿಲ್ಲೆಯೊಳಗೆ ಎಷ್ಟು ವಸೂಲ್ಮಾಡಿದ್ದೀರಿ ಮತ್ತು ವಸೂಲ್ಮಾಡುತ್ತಿ ದ್ದೀರಿ ಎಂಬುದನ್ನು ತಿಳಿಸುತ್ತೀರಾ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜೋಳದ ಸೀಸನ್ ಇನ್ನೂ ಮುಗಿಯಲಿಕ್ಕೆ ಬಂದಿಲ್ಲ. ಈಗ ಸೀಸನ್ ಪ್ರಾರಂಭವಾಗಿದೆ. ಇವತ್ತು ಒಂದು ಆರ್ಡರ್ ಹೊರಡುತ್ತದೆ. ಅದು ನಾಳೆ ನಾಡಿದ್ದರಲ್ಲಿ ಎಲ್ಲ ಕಡೆಗೂ ಹೋಗುತ್ತದೆ. ಒಂದು ಲಕ್ಷ ಟನ್ ಜೋಳವನ್ನು ವಸೂಲು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಬಹುಮಟ್ಟಿಗೆ ಅದು ಉತ್ತರ ಕರ್ನಾಟಕದಲ್ಲಿ ಆಗುತ್ತದೆ. ಅದರಲ್ಲಿಯೂ ಬಿಜಾಪುರ ಜಿಲ್ಲೆಯಲ್ಲಿ ಜಾಸ್ತಿಯಾಗುತ್ತದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಅರ್ಬನ್ ಜನಸಂಖ್ಯೆ 25 ಲಕ್ಷ ಮತ್ತು ಗ್ರಾಮಾಂತರ ಜನ ಸಂಖ್ಯೆ 25 ಲಕ್ಷ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗಾದರೆ ಒಕ್ಕ ಜನರ ಗತಿ ಏನು ಸ್ವಾಮಿ ? ಗಲಭೆ ಮಾಡಿದವರಿಗೆ ಕೊಡುತ್ತೇವೆಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ಬಂದಾಗ ಗಲಭೆ ಮಾಡಿ ಮನವಿಯನ್ನು ಕೊಟ್ಟಾಗ್ಲೂ ನಮಗೆ ಅಕ್ಕಿ ಜಾಸ್ತಿ ಮಾಡಲಲ್ಲ. ಇದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅರ್ಬನ್ ಜನ ಸಂಖ್ಯೆಯಲ್ಲಿ ನೀವು ಇಲ್ಲ. ಆದುದರಿಂದ ಎಷ್ಟು ಗಲಭೆ ಮಾಡಿದರೂ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಹಾಗಾದರೆ ಅವರೆಲ್ಲ ಸಾಯಬೇಕೆ ಸ್ವಾಮಿ ?

(ಉತ್ತರವಿಲ್ಲ)

1-30 P.M.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇದುವರೆಗೂ ಯಾವ್ಯಾವ ಜಿಲ್ಲೆಯೊಳಗೆ ಎಷ್ಟೆಷ್ಟು ಬತ್ತ ಸಂಗ್ರಹವಾಗಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಶಿವಮೊಗ್ಗದಲ್ಲಿ 1½ ಲಕ್ಷ ಕ್ವಿಂಟಾಲ್, ಮೈಸೂರಿನಲ್ಲಿ 1½ ಲಕ್ಷ ಕ್ವಿಂಟಾಲ್, ಮಂಡ್ಯದಲ್ಲಿ 1 ಲಕ್ಷದಷ್ಟು ಕ್ವಿಂಟಾಲ್, ಕೂರ್ಗಿನಲ್ಲಿ 50 ಸಾವಿರ ಕ್ವಿಂಟಾಲ್, ಧಾರವಾಡದಲ್ಲಿ 80 ಸಾವಿರ ಕ್ವಿಂಟಲ್, ಬೆಳಗಾವಿನಲ್ಲಿ 42 ಸಾವಿರ ಕ್ವಿಂಟಲ್, ರಾಯಚೂರಿನಲ್ಲಿ 40-45 ಸಾವಿರ ಕ್ವಿಂಟಲ್, ಬಳ್ಳಾರಿಯಲ್ಲಿ 22 ಸಾವಿರ ಕ್ವಿಂಟಲ್—ಹೀಗೆ ಒಟ್ಟು ಕೇವಲ 10 ಲಕ್ಷ ಕ್ವಿಂಟಲ್ ಅಥವಾ ಒಂದು ಲಕ್ಷ ಟನ್ನಿನಷ್ಟು ವಸೂಲಿ ಹೆಚ್ಚು ಕಡಿಮೆ ಆಗಿದೆ.

Sri J. P. SARVESH.—At what rate has the Government decided to purchase 1 Quintal ?

Sri M. V. KRISHNAPPA.—Tomorrow you will come to know that.

ಶ್ರೀ ಚನ್ನಬೈರೇಗೌಡ.—ಬೆಂಗಳೂರು ಮತ್ತು ಕೋಲಾರ ಡಿಫಿಸಿಟ್ ಜಿಲ್ಲೆಗಳಾಗಿರುವುದರಿಂದ ಜಿಲ್ಲೆಯಿಂದ ಜಿಲ್ಲೆಗಳಿಗೆ ಈ ಆಹಾರ ಪದಾರ್ಥಗಳನ್ನು ಕಳುಹಿಸುವುದನ್ನು ಬ್ಯಾನ್ ಮಾಡಿ ತೆಗೆಯುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ 2 ಲಕ್ಷ ಟನ್ನುಗಳಷ್ಟು ಬತ್ತ ವಸೂಲಾಗಬೇಕು. ಆಮೇಲೆ ಈ ವಿಚಾರವನ್ನು ಯೋಚನೆ ಮಾಡುತ್ತೇವೆ.

Sri S. SIVAPPA.—The Minister was pleased to state that the Government has a scheme to have a buffer stock of 3 lakh tons. What is the cost of 3 lakh tons and what is the allotment the Government has made towards this purchase ?

ಶ್ರೀ ಎಂ. ವಿ. ಕೃಷ್ಣಪ್ಪ.—ಐದು ಲಕ್ಷ ಟನ್‌ಗಳಷ್ಟು buffer stock ಇತ್ತೆಂದು ಹೇಳಿದೆ. ಅದರಲ್ಲಿ 2½ ಲಕ್ಷ ಟನ್ನುಗಳಷ್ಟು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಅವರು in advance ನಮಗೆ ಕಳುಹಿಸುತ್ತಾರೆ. ನಾವು ಅದನ್ನು ತಂದು ತಿಂದಮೇಲೆಯೇ ಅವರಿಗೆ ದುಡ್ಡು ಕೊಡುತ್ತೇವೆ. ಸರ್ಕಾರದವರೇ ಸುಮಾರು 1½ ಕೋಟಿ ರೂಪಾಯಿಗಳನ್ನು ನೇರವಾಗಿ ಕೊಳ್ಳುವುದಕ್ಕೆ ಕೊಟ್ಟಿದ್ದಾರೆ. ಕೋ-ಆಪರೇಟಿವ್ ಸೊಸೈಟಿಗಳಿಗೆ ಒಂದೂವರೆ ಕೋಟಿ ಕೊಡುತ್ತಾರೆ. ಅವರು ಇದರ ಐದರಷ್ಟು ಕ್ಯಾಪಿಟಲ್ ಮಾಡಿ 5 ಕೋಟಿ ರೂಪಾಯಿಗಳನ್ನು ಬೇಕಾದರೆ ಇನ್ವೆಸ್ಟ್ ಮಾಡುತ್ತಾರೆ. ಇದಲ್ಲದೆ 4 ಕೋಟಿ ರೂಪಾಯಿಗಳನ್ನು ಜೋಳ ಮತ್ತು ಬತ್ತಕ್ಕೆ ಉಪಯೋಗಿಸಬೇಕಾಗಿದೆ. ಪುಡ್ ಕಾರ್ಪೊರೇಷನ್ನಿನವರು ಕೇಂದ್ರ ಸರ್ಕಾರದವರನ್ನು ಕೇಳುವುದರಿಂದ ನಾವು ಒಂದು ಲಕ್ಷ ಟನ್‌ಗಳಷ್ಟು ಆಹಾರವನ್ನಾದರೂ ಇಟ್ಟುಕೊಳ್ಳಬೇಕಾಗಿದೆ. ಆದಕ್ಕಾಗಿ ಆರು ಕೋಟಿ ರೂಪಾಯಿಗಳು ಖರ್ಚಾಗುತ್ತದೆ.

ಶ್ರೀ ಜಿ. ಎ. ಗೌಡ.—ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಧಾನ್ಯಗಳನ್ನು ಸಾಗಾಣಿಕೆ ಮಾಡುವ ಬಗ್ಗೆ ಬ್ಯಾನ್ ಮಾಡುವುದರಿಂದ ಕೆಲವು ಕಡೆಗಳಲ್ಲಿ ಸರ್ಕಾರದವರು ದರಗಳನ್ನು ನಿಗದಿ ಮಾಡಿರುವುದಕ್ಕಿಂತ ಹೆಚ್ಚಿಗೆ ಬೆಲೆ ನಿಗದಿ ಮಾಡಿರುವುದರಿಂದ ಜನಗಳಿಗೆ ಹೆಚ್ಚು ತೊಂದರೆಯಾಗಿದೆಯಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಡೆಫಿಸಿಟ್ ಜಿಲ್ಲೆಗಳಲ್ಲಿ ಇಂತಹ ಬ್ಯಾನ್ ಆಜ್ಞೆಯ ನಿರ್ಬಂಧ ಇರುತ್ತದೆ. ಸರ್ಪ್ಲಸ್ ಡಿಸ್ಟ್ರಿಕ್ಟ್‌ಗಳಲ್ಲಿ ಹೆಚ್ಚಿಗೆ ವಸೂಲಾಗುವ ಕಾರಣ ಈ ಆಜ್ಞೆ ಜಾರಿಯಲ್ಲಿರುವುದಿಲ್ಲ. ಆದರಿಂದಲೇ ಕೊರತೆ ಜಿಲ್ಲೆಗಳಾದ ಬೆಂಗಳೂರು, ಕೋಲಾರಗಳಲ್ಲಿ ಈ ಆಹಾರ ಪದಾರ್ಥಗಳ ಬೆಲೆಗಳು ಏರಿವೆ. ಸರ್ಪ್ಲಸ್ ಜಿಲ್ಲೆಗಳಲ್ಲಿ ಬೆಲೆಗಳು ಕಡಿಮೆಯಾಗಿವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಶಿವಮೊಗ್ಗಾ ಜಿಲ್ಲೆಯಲ್ಲಿ ಬತ್ತ ಸಂಗ್ರಹ ಕಾರ್ಯಕ್ರಮದಲ್ಲಿ ರೈತರು ನೂರಾರು ಗಾಡಿಗಳನ್ನು ಕಟ್ಟಿ ಮೆರವಣಿಗೆ ಮುಖಾಂತರ ತೆಗೆದುಕೊಂಡು ಬರತಕ್ಕ ಸಂದರ್ಭಗಳಿದ್ದರೂ ಸರ್ಕಾರದವರು ಹಣವನ್ನು ಕೊಡುವುದರಲ್ಲಿ ತೊಂದರೆ ಮಾಡಿದ್ದರಿಂದ ಅಲ್ಲಿನ ಕಲೆಕ್ಷನ್ ಕಡಿಮೆಯಾಗಿದೆಯಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರ ತಾಲ್ಲೂಕಾದ ಭದ್ರಾವತಿಯಲ್ಲಿ 300 ಗಾಡಿ ಬತ್ತವನ್ನು ಉತ್ಪವದಲ್ಲಿ ತರಬೇಕು, ನನನ್ನು ಬನ್ನ�ಿ ಎಂದು ಕರೆದರು. ನನಗೆ ಯಾವುಪೋ ಒಂದು ಕೆಲಸವಿದ್ದುದರಿಂದ ಅಲ್ಲಿಗೆ ಹೋಗಲಿಕ್ಕಾಗಲಿಲ್ಲ. ಕೆಲವು ಕಡೆಗಳಲ್ಲಿ ದುಡ್ಡು ಇಲ್ಲದೆ ತೊಂದರೆ ಯಾಗಿದೆ. ನಮ್ಮಲ್ಲಿರತಕ್ಕ ಹಣವನ್ನು ಖರ್ಚು ಮಾಡಿದ್ದೇವೆ. ಆದ್ದರಿಂದಲೇ ಪುಡ್ ಕಾರ್ಪೊರೇಷನವರನ್ನು ಮತ್ತು ಕೇಂದ್ರ ಸರ್ಕಾರದವರನ್ನು ದುಡ್ಡು ಕೇಳುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸರ್ಕಾರದ ಕೈವಾಡ ಇದರಲ್ಲಿ ಇರುವುದರಿಂದಲೇ ಸಂಸ್ಥಾನ ದಿಂದ ಹೆಚ್ಚಿಗೆ ಆಹಾರ ಪದಾರ್ಥಗಳು ಹೊರಗೆ ಹೋಗುತ್ತವೆ. ಇವರು ಇದನ್ನು ಕೈ ಬಿಟ್ಟರೆ ಬಹಳ ಚೆನ್ನಾಗಿರುತ್ತದೆ. ನಮಾಜಕ್ಕೆ ಇದನ್ನು ಬಿಟ್ಟರೆ ನಮ್ಮ ದೇಶದ ಆಹಾರದ ನೀತಿ ಒಳ್ಳೆಯದಾಗುತ್ತ ದೆಂದು ತಮ್ಮ ಅಭಿಪ್ರಾಯವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೈಸೂರು ಸಂಸ್ಥಾನಕ್ಕೆ ಒಂದು ಪ್ರತ್ಯೇಕವಾದ ಹಾಗೂ ಸ್ವತಂತ್ರವಾದ ಪದ್ಧತಿಯನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಆರ್–ಇಂಡಿಯಾ ಪಾಲಿಸಿ ಗನುಸಾರವಾಗಿ ನಡೆಸಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇದನ್ನು ಮಂತ್ರಿಗಳು ಅಲ್ಲಿಗೆ ಹೋದಾಗ ಹೇಳುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿಗೆ ಹೋದಾಗಲೆಲ್ಲಾ ಅದನ್ನು ಹೇಳುತ್ತಲೇ ಇದ್ದೇವೆ.

ಶ್ರೀ ಜಿ. ಮಾದೇಗೌಡ.—ಪಡಿತರ ಪದ್ಧತಿ ಜಾರಿಯಲ್ಲಿರುವ ಕಡೆಗಳಲ್ಲಿ ವರ್ತಕರಲ್ಲಿ ಕೆಲವರು ಈ ಆಹಾರ ಧಾನ್ಯಗಳನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಹೆಚ್ಚಿನ ಬೆಲೆಗೆ ಮಾರುವುದರಿಂದ ಅಂತಹವರ ಮೇಲೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪೋಲೀಸ್ ಇಲಾಖೆಯಲ್ಲಿ ಒಂದು ಪುಡ್ ಸ್ಕ್ವಾಡ್‌ಸೆಲ್ ಎಂದು ಮಾಡಿಕೊಂಡಿದ್ದಾರೆ. ಅವರು ಬೆಂಗಳೂರಿನಲ್ಲಿಯೇ ಅಲ್ಲದೆ ಹೊರಗಡೆ ಹೋಗಿ ಅಂತಹವರನ್ನು ಹಿಡಿಯುತ್ತಿದ್ದಾರೆ. ವರ್ತಮಾನ ಪತ್ರಿಕೆಗಳಲ್ಲಿ ದಿನವಹಿ ಬರುತ್ತಿರುತ್ತದೆ. ಅಂತಹವರ ಮೇಲೆ ಕೇಸುಗಳನ್ನು ಸಹ ಹಾಕುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಕಳೆದ ವರ್ಷ ಉಂಟಾಗಿದ್ದಂಥ ಭಯಾನಕ ಆಹಾರ ಪರಿಸ್ಥಿತಿ ಹಿನ್ನೆಲೆಯಲ್ಲಿ ಸರ್ಕಾರದವರು ಎಚ್ಚೆತ್ತಿರುವುದರಿಂದ, ಈ ವರ್ಷ ಜೂನ್ ತಿಂಗಳಿಂದ ಮುಂದಿನ ನುಗ್ಗಿತನಕ ಸರ್ಕಾರದ ದರದಲ್ಲಿ ಅಕ್ಕಿ, ರಾಗಿ, ಜೋಳ-ಮುಂತಾದ ಆಹಾರ ಪದಾರ್ಥಗಳನ್ನು ಜನಗಳಿಗೆ ಹಂಚುವಂತೆ ಈಗಾಗಲೇ ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ? ಮತ್ತು ಈ ವಿಚಾರದ ಬಗ್ಗೆ ಏಜೆನ್ಸಿಗಳು ಯಾವ್ಯಾವುವು ಎಂಬುದಾಗಿ ತೀರ್ಮಾನ ಮಾಡಿದ್ದಾರೆ, ಅಲ್ಲದೆ ಈ ರೀತಿ ಹಂಚುವ ಕೆಲಸವನ್ನೇನಾದರೂ ಆಹಾರ ಕಾರ್ಪೊರೇಷನ್ನಿಗೆ ವಹಿಸಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರಿಗೆ ಇಷ್ಟು ಹೊತ್ತು ಹೇಳಿದ ಉತ್ತರ ಗೊತ್ತಾಗಲಿಲ್ಲ ವೆಂದು ಕಾಣುತ್ತದೆ. ಮತ್ತೊಂದುಸಾರಿ ಉತ್ತರ ಕೊಡುತ್ತೇನೆ. ಪಟ್ಟಣಗಳಲ್ಲಿ ನುಮಾರು 25 ಲಕ್ಷ ಜನಗಳಿಗಾಗುವಷ್ಟು ಆಹಾರ ದಾನ್ಯ ಈಗಾಗಲೇ ಶೇಖರಿಸಿರುವುದರಿಂದ, ಸ್ಕೇರ್ಸಿಟಿ ಕಾಲದಲ್ಲಿ 25 ಲಕ್ಷ ಜನ ಅಥವಾ 50 ಲಕ್ಷ ಜನಗಳಿಗೆ ನುಮಾರು 6-7-8 ತಿಂಗಳಿಗೆ ಆಗುವಷ್ಟು ಆಹಾರವನ್ನು ಪ್ರೊಕ್ಯೂರ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅಂದ ಮೇಲೆ 5 ಲಕ್ಷ ಟನ್ನುಗಳಷ್ಟು ಆಹಾರ ಬೇಕಾಗುತ್ತದೆ. 2½ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಕೇಂದ್ರ ಸರ್ಕಾರ ದವರು ಕೊಡುತ್ತಾರೆ. ಉಳಿದ 2½ ಲಕ್ಷ ಟನ್ನುಗಳಷ್ಟು ಆಹಾರವನ್ನು ನಾವು ಪ್ರೊಕ್ಯೂರ್ ಮಾಡಬೇಕಾಗುತ್ತದೆ. ಹಂಚುವ ಕಾರ್ಯ ಈಗಾಗಲೇ ನಡೆಯುತ್ತಾ ಇದೆ. ಬೆಂಗಳೂರಿನಲ್ಲಿ ಎಷ್ಟೋ ಫೇರ್ ಪ್ರೈಸ್ ಅಂಗಡಿಗಳ ಮೂಲಕ ಕಾರ್ಡ್‌ನ ಮನೆಗಳಿಗೆ ಕೊಟ್ಟು ಹಂಚುವ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದೆ. ಇಂಥಿಂಥ ಕಾರ್ಡ್‌ನ ಇಂಥಿಂಥ ಅಂಗಡಿಗಳಿಗೆ ಎಂಬುದಾಗಿ ಆಗಲೇ ಸರ್ಕಾರದವರು ಅಲಾಟ್ ಮಾಡಿ ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿದ್ದಾರೆ. ಅಲ್ಲದೆ ಕೋ-ಆಪರೇಟಿವ್ ಸೊಸೈಟಿಗಳಿಗೂ ಕೊಟ್ಟು ಮಿಕ್ಕಿದ್ದನ್ನು ಪ್ರೈವೇಟ್ ಇಂಡಿವಿಜುಯಲ್ಸ್‌ಗೂ, ವರ್ಕರ್ಸ್‌ಗೂ ಕೊಡುತ್ತಿದ್ದಾರೆ. ಕಾರ್ಡ್‌ನ ಕೊಟ್ಟ ಮೇಲೆ ಸೊಸೈಟಿಯವರು ಮಾಡಿದರೂ ಒಂದೇ. ಪ್ರತಿಯೊಬ್ಬರೂ ಇಂಡಿವಿಜುಯಲ್ಲಾಗಿ ಕಾರ್ಡ್‌ನ ಮೇಲೆ ಆಹಾರ ಪದಾರ್ಥಗಳನ್ನು ಡ್ರಾ ಮಾಡುತ್ತಾರೆ. ಆದ್ದರಿಂದ ಯಾರೂ ಏನೂ ಕದಿಯುವುದಕ್ಕಾಗುವುದಿಲ್ಲ. ಅದಕ್ಕಾಗಿ ಪುಡ್ ಕಾರ್ಪೊರೇಷನ್ನಿನವರು ಹಂಚುವ ಕೆಲಸವನ್ನು ಮಾಡುವುದಿಲ್ಲ. ಅವರು ಮತ್ತು ಕೇಂದ್ರ ಸರ್ಕಾರ ದವರು ಆಹಾರ ಧಾನ್ಯಗಳನ್ನು ಪ್ರೊಕ್ಯೂರ್ ಮಾಡುತ್ತಾರೆ ನಾವು ಅವರು ಪ್ರೊಕ್ಯೂರ್ ಮಾಡಿ ದ್ದನ್ನು ಸ್ಟಾಕ್ ಆಗಿ ಇಟ್ಟುಕೊಂಡಿರುವುದಕ್ಕಾಗಿ ನಮಗೆ ವಾಪಸ್ಸು ಕೊಡುತ್ತಾರೆ. ಹಂಚುವ ಕೆಲಸಕ್ಕೆ ಅವರು ಹೋಗುವುದಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಜಾಸ್ತಿ ಆಹಾರ ಧಾನ್ಯಗಳನ್ನು ಬೆಳೆಯತಕ್ಕ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಗಾಗ್ಗೆ ಆಹಾರದಲ್ಲಿ ಹಾಹಾಕಾರ ಉಂಟಾಗುವುದರಿಂದ ಸರ್ಕಾರದವರು ಈಗ ಮಾಡಿರುವ ಕಾನೂನು ರೀತ್ಯ ಅಲ್ಲಿಗೇನು ವ್ಯವಸ್ಥೆ ಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಚಿಕ್ಕಮಗಳೂರು ಜಿಲ್ಲೆ ಕೊರತೆ ಜಿಲ್ಲೆಯೂ ಅಲ್ಲ, ಸರ್ಪ್ಲಸ್ ಜಿಲ್ಲೆಯೂ ಅಲ್ಲ. ಅಲ್ಲಿನ ಪ್ಲಾಂಟರ್ಸ್ ಲೇಬರರ್ಸಿಗೆ ಅಗುವಷ್ಟು ಆಹಾರ ಧಾನ್ಯಗಳನ್ನು ಸರ್ಪ್ಲಸ್ಸಾಗಿ ಬೆಳೆಯುತ್ತಾರೆ. ಪ್ಲಾಂಟರ್ಸ್ ಹೆಚ್ಚಿಗೆ ಬೆಳೆದುದ್ದನ್ನು ಪೂರ್ತಿ ಸರ್ಕಾರಕ್ಕೆ ಕೊಡಬೇಕೆಂದು ಪ್ರತಿಭಟನೆ ಮಾಡಿದ್ದೇ ಆದರೆ ಆಗ ಪ್ಲಾಂಟೇಷನ್ ಲೇಬರ್ಸ್‌ಗೆ ಆಹಾರವನ್ನು ನರಬರಾಜು ಮಾಡುವ ಜವಾಬ್ದಾರಿಯನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಆಹಾರ ಧಾನ್ಯಗಳ ಬೆಲೆ ಡಿಫಿಸಿಟ್ ಜಿಲ್ಲೆಗಳಲ್ಲಿ ಜಾಸ್ತಿಯಾಗಿ ಸರ್ಪ್ಲಸ್ ಜಿಲ್ಲೆಗಳಲ್ಲಿ ಕಡಿಮೆಯಾಗಿರುವುದರಿಂದ, ಕಡಿಮೆಯಾಗಿರುವ ಕಡೆಗಳಲ್ಲಿ ರೈತರಿಗೆ ಸರಿಯಾದ ಧಾರಣೆಯಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುವುದು ಮತ್ತು ಧಾರಣೆ ಜಾಸ್ತಿಯಾಗಿರುವ ಕಡೆಗಳಲ್ಲಿಯೂ ಜನಗಳಿಗೆ ಸರಿಯಾಗಿ ಆಹಾರ ಧಾನ್ಯಗಳನ್ನು ಒದಗಿಸುವುದು-ಹೀಗೆ ಎರಡು ಕಡೆಗಳಲ್ಲಿಯೂ ಸರ್ಕಾರದವರು ಈಕ್ವೇಟ್ ಮಾಡಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಡಿಫಿಸಿಟ್ ಜಿಲ್ಲೆಗಳಲ್ಲಿ ಜಾಸ್ತಿಯಾಗಿ ಈ ಆಹಾರ ಧಾನ್ಯಗಳ ಸಾಗಾಣಿಕೆ ಬ್ಯಾನ್ ಆಗಿರುವುದರಿಂದ ಕೆಲವು ಪದಾರ್ಥಗಳ ಬೆಲೆ ಏರಿರುತ್ತದೆ. ಸರ್ಕಾರದವರು ಆಹಾರ ಪದಾರ್ಥಗಳು ಬಂದ ಹಾಗೆ ಸ್ವಲ್ಪ ಸ್ವಲ್ಪ ಕೊಡುತ್ತಾರೆ. ಸರ್ಪ್ಲಸ್ ಜಿಲ್ಲೆಗಳಲ್ಲಿ ವಸೂಲು ಚೆನ್ನಾಗಿ ಆದ ಮೇಲೆ ಪೂರ್ತಿ ಬ್ಯಾನನ್ನು ರಿಮೂವ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಕೆ. ಪಿ. ಗದಗ್.—ಈಗ ಸರ್ಕಾರದವರು ಮಾಡತಕ್ಕ ಭೂ ಸುಧಾರಣೆಯ ಯೋಜನೆಯ ಪ್ರಕಾರ ಆಹಾರ ಧಾನ್ಯಗಳು ಗ್ರಾಹಕರಿಗೆ ದೊರೆಕಿಸುವುದಕ್ಕೆ ತಕ್ಕ ಶಕ್ತಿಯನ್ನು ಹೊಂದಿಲ್ಲದೇ ಇರುವುದರಿಂದ ಇವರ ಒಂದು ನೀತಿ ವಲ್ನರಬಲ್ ಎಂಬುದಾಗಿ ತಿಳಿಯೋಣವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ವಲ್ನರಬಲ್ ಎಂದರೆ ಸ್ಕೇರ್ಸಿಟಿ ಬಂದು ಹೈಲಿ ಡಿಫಿಸಿಟ್ ಆಗುತ್ತದೆ. ಅರ್ಬನ್ ಏರಿಯಾದಲ್ಲಿ ಪಾಪ್ಯುಲೇಷನ್ ಜಾಸ್ತಿ ಇದ್ದು ಅಲ್ಲಿ ಕಮಿರ್ಷಿಯಲ್ ಬೆಳೆ ಬೆಳೆದು ಅಹಾರಧಾನ್ಯ ಬೆಳೆಯದೆ ಇರುವ ಪ್ರದೇಶಕ್ಕೆ ವಲ್ನರಬಲ್ ಎಂದು ಹೇಳುತ್ತಾರೆ. ಅದರೆ ಈಗ ಮಾನ್ಯ ಸದಸ್ಯರು ಕೊಟ್ಟಂತಹ ವ್ಯಾಖ್ಯಾನವನ್ನು ಅಲೋಚನೆ ಮಾಡಿ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು ನಮ್ಮ ಮೈಸೂರು ರಾಜ್ಯದಲ್ಲಿ ಎರಡೂವರೆ ಲಕ್ಷ ಟನ್ ಅಹಾರಧಾನ್ಯವನ್ನು ಪ್ರೊಕ್ಯೂರ್ ಮಾಡಬೇಕೆಂದು ಟಾರ್ಗೆಟ್ ಇಟ್ಟುಕೊಂಡಿದ್ದೇವೆಂದು, ಅದರೆ ಸರ್ಕಾರದವರು ಇದುವರೆಗೂ ಎರಡೂವರೆ ಲಕ್ಷ ಟನ್ ಆಹಾರಧಾನ್ಯವನ್ನು ಪ್ರೊಕ್ಯೂರ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಮುಂದೆ ಬರುವ ಸೆಪ್ಟೆಂಬರ್ ತಿಂಗಳಿನಲ್ಲಿ ಈ ರಾಜ್ಯದಲ್ಲಿ ಹಿಂದೆ ಒದಗಿದ್ದಂತಹ ಗಂಡಾಂತರ ಪರಿಸ್ಥಿತಿ ಒದಗುತ್ತದೆ ಎನ್ನುವಂತಹ ಸಂಶಯ ಬರುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಎಂದುಕೊಂಡಿರುವ ಹಾಗೆ ನಾವು ಎಂದುಕೊಂಡಿಲ್ಲ. ಈ ಸಾರಿ ನಮ್ಮ ದೇಶದಲ್ಲಿ ಒಳ್ಳೆಯ ಬೆಳೆಯಾಗಿದೆ. ಈಗ ಸರ್ಕಾರದವರು ಹಾಕಿ ಕೊಂಡಿರುವ ಅಹಾರಧಾನ್ಯದ ಪ್ರೊಕ್ಯೂರ್‌ಮೆಂಟ್ ಪಾಲಿಸಿ ಕೂಡ ಸ್ವಲ್ಪ ಹೆಚ್ಚುಕಡಿಮೆ ಟಾರ್ಜೆಟ್ ರೀಚ್ ಅಗುವ ಭರವಸೆ ಇದೆ. ಅದರ ಎಸ್ಟಿಮೇಟನ್ನು ಮಾಡಿ ನಾವು ಇಟ್ಟುಕೊಂಡಿದ್ದೇವೆ. ಅದ್ದರಿಂದ ಮುಂದೆ ಬರುವ ವರ್ಷದಲ್ಲಿ ಅಂಥಾ ತೊಂದರೆ ಬರಲಾರದು ಎಂಬ ಭರವಸೆ ನಮಗೆ ಇದೆ. ದೇಶದಲ್ಲಿ ಈ ವರ್ಷ ಸಾಕಷ್ಟು ಬೆಳೆ ಆಗಿದೆ. ಎರಡನೆಯ ಬತ್ತದ ಬೆಳೆ ಸಮ್ಮರ್ ಕ್ರಾಪ್ ಇನ್ನು 5–6 ತಿಂಗಳಲ್ಲಿ ಬರುತ್ತದೆ. ಕೋಲಾರ, ಮಂಡ್ಯ ತುಮಕೂರು, ಬೆಂಗಳೂರು ಮತ್ತು ಮದ್ದೂರು ಈ ಪ್ರದೇಶಗಳಲ್ಲಿ ಬತ್ತದ ಬೀಸಿಗೆ ಬೆಳೆಯು ಬಹಳ ಚೆನ್ನಾಗಿ ಬರುತ್ತದೆ.

ಶ್ರೀಮತಿ ಅನ್ನಪೂರ್ಣಾಬಾಯ್ ರಾಗಜೆ.—ಬೀದರ್ ನಲ್ಲಿ ಒಬ್ಬಮನುಷ್ಯನಿಗೆ ಒಂದು ತಿಂಗಳಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ—ಬೀದರ್ ಅರ್ಬನ್ ಏರಿಯಾದಲ್ಲಿ ಬರುತ್ತದೆ. ಈಗ ಆಹಾರಧಾನ್ಯದ ಪ್ರೊಕ್ಯೂರ್ ಮೆಂಟ್ ನಡೆಯುತ್ತಿದೆ. ಬೇಕಾದರೆ ಜಾಸ್ತಿ ಕೊಡುತ್ತಾರೆ.

———